| Publication | Vijay Karnataka |
| --- | --- |
| Date | 14 October 2023 |

# ಅ. 16ರಂದು ಬೆಂಗಳೂರು ಮ್ಯಾರಥಾನ್

**ವಿಕ ಸುದ್ದಿಲೋಕ** ಬೆಂಗಳೂರು

ಶ್ರೀರಾಮ್ ಪ್ರಾಪರ್ಟೀಸ್‌ನ ಬೆಂಗಳೂರು ಮ್ಯಾರಥಾನ್ 9ನೇ ಆವೃತ್ತಿ ಅಕ್ಟೋಬರ್ 16ರಂದು ಭಾನುವಾರ ನಗರದ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಸುಮಾರು 11 ಸಾವಿರಕ್ಕೂ ಅಧಿಕ ಸಂಖ್ಯೆಯ ಓಟಗಾರರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಆಯೋಜಕರು ಗುರುವಾರ ತಿಳಿಸಿದ್ದಾರೆ.

ಮ್ಯಾರಥಾನ್‌ನಲ್ಲಿ ಒಟ್ಟು ನಾಲ್ಕು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಫುಲ್ ಮ್ಯಾರಥಾನ್ (42.2 ಕಿ.ಮೀ. /ಬೆಳಗ್ಗೆ 4 ಗಂಟೆಗೆ ) 'ಮತ್ತು ಹಾಫ್ ಮ್ಯಾರಥಾನ್ (21.09 ಕಿ.ಮೀ./ ಬೆಳಗ್ಗೆ 6.15ಕ್ಕೆ) ಜತೆಗೆ 10 ಕಿ.ಮೀ. ಮತ್ತು 5 ಕಿ.ಮೀ ವಿಶೇಷ ಓಟಗಳ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

| Publication | Vijayavani |
| --- | --- |
| Date | 14 October 2023 |

# 16ರಂದು ಬೆಂಗಳೂರು ಮ್ಯಾರಥಾನ್

» 11 ಸಾವಿರ ಓಟಗಾರರು ಭಾಗಿ ನಿರೀಕ್ಷೆ

ಬೆಂಗಳೂರು: ಶ್ರೀರಾಮ್ ಪ್ರಾಪರ್ಟೀಸ್ ಬೆಂಗಳೂರು ಮ್ಯಾರಥಾನ್ ಓಟ ಭಾನುವಾರ (ಅ.16) ನಡೆಯಲಿದೆ. ಈ ಬಾರಿಯ ಮ್ಯಾರಥಾನ್‌ನಲ್ಲಿ 11,000ಕ್ಕೂ ಹೆಚ್ಚಿನ ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ. ಶ್ರೀ ಕಂಠೀರವ ಕ್ರೀಡಾಂಗಣದ ಬಳಿ ಶ್ರೀರಾಮ್ ಪ್ರಾಪರ್ಟೀಸ್ ಲಿ. ಚೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ. ಮುರಳಿ ಹಾಗೂ ನಟ ಧೀರೇನ್ ರಾಮ್‌ಕುಮಾರ್ ಮ್ಯಾರಥಾನ್‌ಗೆ ಚಾಲನೆ ನೀಡಲಿದ್ದಾರೆ. ನಾಲ್ಕು ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಬೆಳಗ್ಗೆ 4 ಗಂಟೆಗೆ ಪೂರ್ಣ ಮ್ಯಾರಥಾನ್ (42.2 ಕಿಮೀ), ಬೆಳಗ್ಗೆ 6.15ಕ್ಕೆ ಅರ್ಧ ಮ್ಯಾರಥಾನ್ (21.09 ಕಿಮೀ), ಬೆಳಗ್ಗೆ 7.45ಕ್ಕೆ ವಿಶೇಷ ಉದ್ದೇಶಕ್ಕಾಗಿ 10 ಕಿಮೀ ಓಟ ಹಾಗೂ ಬೆಳಗ್ಗೆ 8.15ಕ್ಕೆ 5 ಕಿಮೀ ಓಟ ಪ್ರಾರಂಭವಾಗುತ್ತದೆ. ಎಲ್ಲ ಸ್ಪರ್ಧೆಗಳು ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಶುರುವಾಗಿ, ಅಲ್ಲಿಯೇ ಕೊನೆಗೊಳ್ಳುತ್ತವೆ. ಪ್ರತಿ ವರ್ಷ ಬೆಂಗಳೂರಿಗರು ಮ್ಯಾರಥಾನ್‌ಗಾಗಿ ಎದುರು ನೋಡುತ್ತಿರುತ್ತಾರೆ. ಒಂದು ಸಂಸ್ಥೆಯಾಗಿ ನಾವು ಯಾವಾಗಲೂ ಉದ್ಯೋಗಿಗಳು ಮತ್ತು ಪಾಲುದಾರರ ದೈಹಿಕ ದೃಢತೆಗೆ ಒತ್ತು ನೀಡಿದ್ದೇವೆ. ಬೆಂಗಳೂರಿನ ಸಾರ್ವಜನಿಕರಲ್ಲೂ ಇದೇ ಚಿಂತನೆಯನ್ನು ವಿಸ್ತರಿಸಿ ಉತ್ತಮ ಆರೋಗ್ಯಕ್ಕಾಗಿ ಓಟ ಮತ್ತು ಒಂದು ಉದ್ದೇಶಕ್ಕಾಗಿ ಓಟ ಎಂಬ ಜಾಗೃತಿ ಮೂಡಿಸುವುದು ನಮ್ಮ ಉದ್ದೇಶ ಎಂದು ಶ್ರೀರಾಮ್ ಪ್ರಾಪರ್ಟೀಸ್ ಲಿ. ಚೇರ್ಮನ್ ಎಂ. ಮುರಳಿ ಹೇಳಿದ್ದಾರೆ.

| Publication | Prajavani |
|---|---|
| Date | 14 October 2023 |

# 16ರಂದು ಬೆಂಗಳೂರು ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮ್ ಪ್ರಾಪರ್ಟೀಸ್ ಪ್ರಾಯೋಜಿಸುವ ಬೆಂಗಳೂರು ಮ್ಯಾರಥಾನ್ ಇದೇ 16ರಂದು ನಡೆಯಲಿದ್ದು, 11 ಸಾವಿರಕ್ಕೂ ಅಧಿಕ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಈ ಕುರಿತು ಗುರುವಾರ ಎನ್‌ಬಿಎ ಸ್ಪೋರ್ಟ್ಸ್ ವರ್ಚುವಲ್ ಪತ್ರಿಕಾಗೋಷ್ಠಿ ಆಯೋಜಿಸಿತ್ತು. ಒಂಬತ್ತನೇ ಆವೃತ್ತಿಯ ಮ್ಯಾರಥಾನ್‌ಗೆ ಕಂಠೀರವ ಕ್ರೀಡಾಂ-ಗಣದಲ್ಲಿ ಭಾನುವಾರ ಶ್ರೀರಾಮ್ ಪ್ರಾಪರ್ಟೀಸ್ ಲಿಮಿಟೆಡ್‌ನ ಚೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಮುರಳಿ ಎಂ. ಮತ್ತು ನಟ ಧೀರೇನ್ ರಾಮ್ ಕುಮಾರ್ ಅವರು ಚಾಲನೆ ನೀಡಲಿದ್ದಾರೆ.

ಮ್ಯಾರಥಾನ್ ಬೆಳಿಗ್ಗೆ 4 ಗಂಟೆಗೆ, ಹಾಫ್ ಮ್ಯಾರಥಾನ್ 6.15ರಿಂದ ನಡೆಯಲಿದೆ. ವಿಶೇಷ ಉದ್ದೇಶಕ್ಕಾಗಿ ನಡೆಯಲಿರುವ 10ಕೆ ಮತ್ತು 5ಕೆ ಓಟಗಳು ಕ್ರಮವಾಗಿ ಬೆಳಿಗ್ಗೆ 7.45 ಮತ್ತು 8.15ರಿಂದ ಆರಂಭವಾಗಲಿವೆ.

‘10ಕೆ ಓಟಕ್ಕೆ ನೋಂದಾಯಿಸುವ ಪ್ರತಿಯೊಬ್ಬರ ಶುಲ್ಕದಲ್ಲಿ ₹ 1 ಸಾವಿರ ಅನ್ನು ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್‌ಗೆ ದಾನವಾಗಿ ನೀಡಲಾಗುತ್ತದೆ. ಕ್ಯಾನ್ಸರ್ ರೋಗಿಗಳಿಗಾಗಿ ಹಣವನ್ನು ಸಂಗ್ರಹಿಸಲು ಮಾತ್ರವಲ್ಲದೆ ಈ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದೊಂದಿಗೆ ಈ ಉಪಕ್ರಮ ನಡೆಯುತ್ತಿದೆ’ ಎಂದು ಧೀರೇನ್ ಹೇಳಿದರು.

ಅರ್ಜುನ ಪ್ರಶಸ್ತಿ ಪುರಸ್ಕೃತ, ಮಾಜಿ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಅಶ್ವಿನಿ ನಾಚಪ್ಪ ಅವರು ಈ ಸಂದರ್ಭದಲ್ಲಿ ಮ್ಯಾರಥಾನ್ ಟಿ-ಶರ್ಟ್ ಮತ್ತು ಪದಕಗಳನ್ನು ಅನಾವರಣಗೊಳಿಸಿದರು.

https://www.bengalurumarathon.in ಮೂಲಕ ಮ್ಯಾರಥಾನ್‌ಗೆ ನೋಂದಾಯಿಸಿಕೊ-ಳ್ಳಬಹುದು.

| Publication | Udayavani |
| --- | --- |
| Date | 14 October 2023 |

# ಅ.16ಕ್ಕೆ ಕಂಠೀರವ ಮೈದಾನದಲ್ಲಿ ನಾಲ್ಕು ಮ್ಯಾರಥಾನ್‌ಗೆ ಚಾಲನೆ

ಮೆಲ್ಬರ್ನ್: ಅ.16ರಂದು ಬೆಂಗಳೂರಿನಲ್ಲಿ ಶ್ರೀರಾಮ್ ಪ್ರಾಪರ್ಟೀಸ್ ಮ್ಯಾರಥಾನ್ ಓಟ ಇಟ್ಟುಕೊಂಡಿದೆ. ಕಂಠೀರವ ಮೈದಾನದಲ್ಲಿ 16ರ ಮುಂಜಾನೆ ಆರಂಭವಾಗುವ ಓಟಕ್ಕೆ ಶ್ರೀರಾಮ್ ಪ್ರಾಪರ್ಟೀಸ್ ಮುಖ್ಯಸ್ಥ ಶ್ರೀಮುರಳಿ, ಚಿತ್ರನಟ ಧೀರೇನ್ ರಾಮ್ ಕುಮಾರ್ (ಡಾ.ರಾಜ್‌ಕುಮಾರ್ ಮೊಮ್ಮಗ) ಚಾಲನೆ ನೀಡಲಿದ್ದಾರೆ.

ಈ ಮ್ಯಾರಥಾನ್‌ನಲ್ಲಿ ನಾಲ್ಕು ರೀತಿಯ ಓಟಗಳಿವೆ. 42.2 ಕಿ.ಮೀ. ದೂರದ ಪೂರ್ಣ ಮ್ಯಾರಥಾನ್‌ಗೆ ಬೆಳಗ್ಗೆ 4 ಗಂಟೆಗೆ ಚಾಲನೆ ನೀಡಲಾಗುತ್ತದೆ. 21.09 ಕಿ.ಮೀ. ದೂರದ ಅರ್ಧ ಮ್ಯಾರಥಾನ್‌ಗೆ ಬೆಳಗ್ಗೆ 6.15ಕ್ಕೆ ಹಸಿರುನಿಶಾನೆ ತೋರಲಾಗುತ್ತದೆ. ವಿಶೇಷ ಕಾರಣವೊಂದನ್ನಿಟ್ಟುಕೊಂಡು 10 ಕಿ.ಮೀ. ದೂರದ ಮ್ಯಾರಥಾನ್ ನಡೆಯಲಿದೆ. ಇದಕ್ಕೆ ಬೆಳಗ್ಗೆ 7.45ಕ್ಕೆ ಚಾಲನೆ ಸಿಗುತ್ತದೆ. 5 ಕಿ.ಮೀ. ದೂರದ ಕಿರು ಮ್ಯಾರಥಾನ್ ಬೆಳಗ್ಗೆ 8.15ಕ್ಕೆ ಆರಂಭವಾಗುತ್ತದೆ. ಎಲ್ಲ ಓಟಗಳು ಕಂಠೀರವ ಮೈದಾನದಿಂದಲೇ ಆರಂಭವಾಗಿ, ಅಲ್ಲೇ ಮುಗಿಯುತ್ತವೆ. ಈಗಾಗಲೇ 11,000 ಮಂದಿ ತಮ್ಮ ಹೆಸರುಗಳನ್ನು ನೋಂದಣಿ ಮಾಡಿಕೊಂಡಿದ್ದಾರೆ.

10 ಕಿ.ಮೀ. ಓಟದ ಪ್ರತೀ ನೋಂದಣಿಯ ಮೂಲಕ ಶಂಕರ ಕ್ಯಾನ್ಸರ್ ಆಸ್ಪತ್ರೆಗೆ ತಲಾ 1000 ರೂ.ಗಳನ್ನು ದಾನವಾಗಿ ನೀಡಲಾಗುತ್ತದೆ ಎಂದು ಶ್ರೀಮುರಳಿ ಹೇಳಿದ್ದಾರೆ. ಈ ಓಟದಲ್ಲಿ ಪಾಲ್ಗೊಳ್ಳಲು ಬಯಸುವವರು https://www.bengalurumarathon.in ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಬಹುದು.

| Publication | Dakshin Bharath |
|---|---|
| Date | 14 October 2023 |

# नौवां बेंगलूरु मैराथन-2022 का आयोजन 16 को

बेंगलूरु। श्रीराम प्रॉपर्टीज बेंगलूरु मैराथन 2022 का 9वां संस्करण एक धमाके के साथ वापस आ गया है और 11,000 से अधिक प्रतिभागियों को आकर्षित करने के लिए पूरी तरह तैयार है। रविवार, 16 अक्टूबर को आयोजित होने वाला, श्रीराम प्रॉपर्टीज बेंगलूरु मैराथन के नौवें संस्करण को कंटीरवा स्टेडियम में अल्ल सुबह 4 बजे से शुरु होगी। इसको हरी झंडी श्रीराम प्रॉपर्टीज लि. के सीएमडी मुरली एम एवं धीरेन राजकुमार दिखाएंगे। मैराथन में चार स्वतंत्र दौड़ शामिल होंगी जिमें 42.2 किलोमीटर की पूर्ण मैराथन शामिल है जो सुबह 4 बजे शुरु होगी। वहीं 21.09 किलोमीटर की दौड़ सुबह 6.15 बजे शुरु होगी। वहीं 10 किलोमीटर की दौड़ 'एक कारण के लिए' सुबह 7.45 बजे शुरु होगी। वहीं 5 किलोमीटर की दौड़ 8.15 बजे शुरु होगी। इस दौड़ के मुख्य प्रायोजक श्रीराम प्रॉपर्टीज लि. है जो पिछले नौ बजे से इस दौड़ का समर्थन करते आ रहे हैं। इस संस्करण में 10 किलोमीटर की एक विशेष दौड़ शामिल हैं, जहां प्रत्येक पंजीकरण के लिए श्री शंकर कैंसर संस्थापक को एक हजार रुपये का दान दिया जाएगा, जिसका प्रतिनिधित्व अभिनेता डॉ. राजकुमार के पोते धीरेन रामकुमार करेंगे। अर्जुन अवार्डी और पूर्व ट्रैक एंड फील्ड एथलीट ने मैराथन सुश्री अश्विनी नचप्पा ने आधिकारिक टी-शर्ट और पदक का अनावरण किया।